# ಮುಸ್ಸಂಜೆ ಮೌನ

ಜೀವನದ ಮುಸ್ಸಂಜೆಯಿದು
ಶೋಕ ಸಂಭ್ರಮಗಳ ಮೀರಿದ ಬದುಕು.
ಧ್ಯಾನದ ಉತ್ತುಂಗ ಸ್ಥಿತಿ
ಅಂತರಂಗದ ಕಲ್ಪನೆಯ ಅನಾವರಣ
ಜೋಳಿಗೆ ದಾಸಯ್ಯ
ಮೀಟುತ್ತಿಲ್ಲ ತಂತಿಯ.
ನಾದ ನಿನಾದಗಳ ಗುಂಗು
ಗೋಡೆಯಾಚೆಗಿನ ಹಸಿರ ಅರಿಸಿ
ಜಿಗಿದು ಲೀನವಾಗಿದೆ
ವಾಸ್ತವದ ನಭದಲ್ಲಿ.
ಬದುಕಲ್ಲಿ ಯಾವ ಹಂಗಿಲ್ಲದ
ಧನ್ಯತಾ ಭಾವ.
ಮೊಗೆದೊಗೆದು ನುಡಿಸಿರುವನು
ತುತ್ತಿನ ಕೂಳಿಗಾಗಿ
ಅವನು ಬೇಡುತ್ತಿಲ್ಲ ಭಿಕ್ಷೆ.
ಸ್ವರಗಳು ಮರೆಯಾದ ಹೊತ್ತಲ್ಲಿ
ಪ್ರಶ್ನೆ ಇದೆ ಅವನಲ್ಲಿ
ತುಂಬೀತೇ ಈ ತುತ್ತಿನ ಜೋಳಿಗೆ ಎಂದು!

**ಪದ್ಮಜ ಪ್ರಸನ್ನ**

# ಕಿನ್ನರಿ ತಾತ

ಹೇಳಿಕೊಡು ತಾತ ನೀನೇ ತಾನೇ
ಕಿನ್ನರಿಯ ನುಡಿಸಿದಾತ
ಅರಸಿ ಅಲೆದಿದೆ ಮನವು
ನುಡಿಸಿ ಮುಗಿಸಿದ ಸ್ವರವ
ಮೊಳಗುತಿದೆ ಒಳಗೊಳಗೆ
ಕೇಳಿ ಉಳಿದಿಹ ನಾದವ
ಕಿನ್ನರಿಯ ನೀ ಕೊಟ್ಟೆ
ನುಡಿಸೆಂದು ಬಳಿಯಿಟ್ಟೆ
ಬರುವ ಸ್ವರವನು ಕೇಳಿ
ಮುಖವ ತಿರುಗಿಸಿ ಬಿಟ್ಟೆ



ಕಿನ್ನರಿಯ ನೀ ಕೊಟ್ಟೆ
ಸ್ವರವ ಹುದುಗಿಸಿಟ್ಟೆ
ಹೇಳಿಕೊಡದೆಯೇ ಬಿಟ್ಟೆ
ಹೇಳು ಇದು ಸರಿಯೇ?

**ಆರ್. ದಿಲೀಪ್ ಕುಮಾರ್**

# ಕಾಯಬೇಕು

ಆಗಾಗ ಹದ ತಪ್ಪುವ ತಂಬೂರಿ
ಶ್ರುತಿ ಮಾಡಿ
ನಿಡುಗಾಲ ನುಡಿಸಿದವ.

ಸುಡು ಬಿಸಿಲು
ಚಳಿ, ಮಳೆ, ಗಾಳಿಗಳ ಲೆಕ್ಕಿಸದೆ
ರಾಗರಸಗಳ ಉಕ್ಕಿಸಿದವ.

ಅಂಡಲೆದು ಬೆಂಡಾಗಿ
ಮಾಗಿದ ದೇಹಭಾವ
ಮಲೆಬದಿಯ ಆ ದನಿಗೆ
ಕಾಯುತಿರೆ ಕಿವಿಯಾಗಿ

ಹರಿದುಕೊಳ್ಳುವುದಲ್ಲ ಹಟಕ್ಕೆ ಬಿದ್ದು;
ತಂತಾನೆ ತೊಟ್ಟು ಕಳಚುವ ತನಕ
ಕಾಯಬೇಕು.

**ಜಿ. ಯೋಗೀಶ, ಸಾಗರ**